**ಸಾಕ್ಷಿಗೆ ದಿನಾಂಕಃ 15.06.2026 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ವಿ.ಬಿ.ಕೆ. ವಕೀಲರಿಂದಃ**

ನಾನು ಡಿಪ್ಲೋಮಾ ಓದಿರುತ್ತೇನೆ. ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ಪ್ರಸ್ತುತ ಮೈಸೂರಿನಲ್ಲಿ ವಾಸವಿರುತ್ತೇನೆ. ವಾದಿಯು ನನಗೆ ದೊಡ್ಡಪ್ಪನ ಮೊಮ್ಮಗಳಾಗಬೇಕು ಎಂದರೆ ಸರಿ. ಈ ದಾವೆಯಲ್ಲಿ ನಮೂದು ಮಾಡಿರುವ ಆಸ್ತಿಗಳ ಬಗ್ಗೆ ನನಗೆ ಗೊತ್ತು. ಪ್ರತಿವಾದಿಗಳು ದಾವಾ ಸ್ವತ್ತುಗಳಿಗೆ ತೊಂದರೆ ನೀಡಿದ ವಿಚಾರ ನನಗೆ ಗೊತ್ತು. ದಾವಾ ಸ್ವತ್ತುಗಳ ಅಕ್ಕಪಕ್ಕ ನಮ್ಮದೇ ಸ್ವತ್ತುಗಳು ಬರುತ್ತವೆ. ನಮಗೆ ಸೇರಿದ ಸ್ವತ್ತಿನ ಸರ್ವೆ ನಂ. 1709. ದಾವಾ ಸ್ವತ್ತುಗಳಲ್ಲಿ ಪ್ರತಿವಾದಿಗಳು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 1 ನೇ ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಭತ್ತ ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ನನಗೆ ಸಂಬಂಧಿಕಳಾಗಿದ್ದರಿಂದ ಅವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮೈಸೂರಿನಲ್ಲಿ ವಾಸವಿದ್ದ ಕಾರಾಣ ದಾವಾ ಸ್ವತ್ತುಗಳಲ್ಲಿ ಯಾರು ಸ್ವಾಧೀನಾನುಭವನ್ನು ಹೊಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**
**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**